ಕರ್ನಾಟಕ ಸರ್ಕಾರ
ಕೃಷಿ ಇಲಾಖೆ, ಕೊಪ್ಪಳ

ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಜಿಲ್ಲಾಡಳಿತ ಭವನ, ಕೊಪ್ಪಳ ದೂ.-08539-221633

ಕ್ರ.ಸಂ:ಜಕೃನಿಕೊ/ಆತ್ಮ/ತಾಂ-3/BTM&ATM/ನೇ.ಗು/2026-27 ದಿನಾಂಕ: 07/09/2026

## :ನೇರಗುತ್ತಿಗೆ ನೇಮಕಾತಿ ಅಧಿಸೂಚನೆ:

ಆತ್ಮ ಯೋಜನೆಯಡಿಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ನೇರ ಗುತ್ತಿಗೆ ಆಧಾರದ ಮೇಲೆ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು (BTM) ಹಾಗೂ ಸಹಾಯಕ ತಾಂತ್ರಿಕ ವ್ಯವಸ್ಥಾಪಕರು (ATM) ಹುದ್ದೆಗಳನ್ನು ಆತ್ಮ ಯೋಜನೆ ಮಾರ್ಗಸೂಚಿ-2025 ರ ಪ್ರಕಾರ ಒಂದು ವರ್ಷದವರೆಗೆ ಹಾಗೂ ನವೀಕರಣದ ಷರತ್ತುಗಳನ್ನೊಳಗೊಂಡಂತೆ ಮೆರಿಟ್ ಆಧಾರದ ಮೇಲೆ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಅಹ್ವಾನಿಸಿದೆ.

ಖಾಲಿ ಇರುವ ಹುದ್ದೆಗಳ ವಿವರ:

| ಕ್ರ.ಸಂ | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ |
|---|---|---|
| 1 | ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು (BTM) | 03 |
| 2 | ಸಹಾಯಕ ತಾಂತ್ರಿಕ ವ್ಯವಸ್ಥಾಪಕರು (ATM) | 04 |

ವಯೋಮಿತಿ: ಅಭ್ಯರ್ಥಿಗಳು **45** ವರ್ಷ ಮೀರಿರಬಾರದು

**ಶೈಕ್ಷಣಿಕ ವಿದ್ಯಾರ್ಹತೆ:**

**ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು (BTM):**

Essential: Post Graduate in Agri/ Allied Sector with computer skills or Agri-Graduates with atleast 5 Years working experience as ATM

Experience: Minimum 2 Years field experience in Agri. Related activities

Remuneration per Month: 30,000/-

**ಸಹಾಯಕ ತಾಂತ್ರಿಕ ವ್ಯವಸ್ಥಾಪಕರು (ATM):**

Essential: Graduate Agri. & Allied Sectors/ Post Graduate Agri. & Allied Sectors

Experience: Minimum 1 Year in Agri. Related activities

Remuneration per Month: 25,000/-

Min Exp: ಮೇಲಿನ BTM & ATM ಹುದ್ದೆಗಳಿಗೆ ಸೂಚಿಸಿದ ಕನಿಷ್ಠ ಅನುಭವ ಕಡ್ಡಾಯವಾಗಿರುತ್ತದೆ.

ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು ರೋಷ್ಟರ್ ಬಿಂದುಗಳು: 03 ಹುದ್ದೆಗಳು

ಕಲ್ಯಾಣ ಕರ್ನಾಟಕ

| ಪ್ರವರ್ಗ | ಇತರೆ | ಒಟ್ಟು |
|---|---|---|
| ಪ.ಜಾ | 1 | 1 |
| ಸಾ.ಅ | 1 | 1 |
| ಒಟ್ಟು | 2 | 2 |

ಉಳಿಕೆ ವೃಂದ

| ಪ್ರವರ್ಗ | ಇತರೆ | ಒಟ್ಟು |
|---|---|---|
| ಪ.ಜಾ | 1 | 1 |
| ಒಟ್ಟು | 1 | 1 |

JOINT DIRECTOR OF AGRICULTURE
KOPPAL

ಸಹಾಯಕ ತಾಂತ್ರಿಕ ವ್ಯವಸ್ಥಾಪಕರು ರೋಸ್ಟರ್ ಬಿಂದುಗಳು: 04 ಹುದ್ದೆಗಳು

ಕಲ್ಯಾಣ ಕರ್ನಾಟಕ

| ಪ್ರವರ್ಗ | ಇತರೆ | ಒಟ್ಟು |
|---|---|---|
| ಪ.ಜಾ | 1 | 1 |
| ಸಾ.ಅ | 1 | 1 |
| ಪ.ಪಂ | 1 | 1 |
| ಒಟ್ಟು | 3 | 3 |

ಉಳಿಕೆ ವೃಂದ

| ಪ್ರವರ್ಗ | ಇತರೆ | ಒಟ್ಟು |
|---|---|---|
| ಪ.ಜಾ | 1 | 1 |
| ಒಟ್ಟು | 1 | 1 |

ಅರ್ಜಿ ಸಲ್ಲಿಸುವ ವಿಧಾನ: ಪ್ರಾಧಿಕಾರದ ವೆಬ್ ಸೈಟ್‌ನಲ್ಲಿ http://www.koppal.nic.in ಲಿಂಕ್ ಅನ್ನು ಆಯ್ಕೆ ಮಾಡಿ ಆನ್ ಲೈನ್ ಮುಖಾಂತರ ಅರ್ಜಿಯನ್ನು ಭರ್ತಿ ಮಾಡಬೇಕು. ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಪ್ರಾರಂಭಿಕ **ದಿನಾಂಕ: 08/09/2026 ರಿಂದ ದಿನಾಂಕ: 19/09/2026 ಸಂಜೆ 5.30ರವರೆಗೆ**, ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಅರ್ಜಿ ಭರ್ತಿ ಮಾಡುವ ಮೊದಲು. ಅರ್ಹತೆಗೆ ಸಂಬಂಧಿಸಿದ ಎಲ್ಲಾ ಸೂಚನೆಗಳನ್ನು ಓದಿಕೊಳ್ಳತಕ್ಕದ್ದು ಹಾಗೂ ನೀಡಿರುವ ಸೂಚನೆಗಳನ್ವಯ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

- ಆಯ್ಕೆ ವಿಧಾನ:
  - ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರು:
    1. Graduate (Agri. & Allied Sectors)- 25 Marks
    2. Post Graduate in Agri/ Allied Sector - 50 Marks
    3. Computer Knowledge-Course Certificates issued by Recognized Institutions like Keonics, Aptech, NIIT etc.- 3 months & above Course duration (3 Marks), 6 months & above Course duration (5 Marks) & 1 year & above Course duration- Max. 10 Marks
    4. Articles/Publications, Recognitions/Rewards etc- Newspaper Publications (2 marks), Research Papers published (2 Marks) & Medals/Rewards Received (1 Mark)
    5. Experience 1 mark for each year – Max. 10 Marks
  - ಸಹಾಯಕ ತಾಂತ್ರಿಕ ವ್ಯವಸ್ಥಾಪಕರು:
    1. Graduate (Agri. & Allied Sectors)- 70 Marks
    2. Post Graduation if any Additional 10 Marks
    3. Computer Knolwedge- Course Certificates Issued by Recognized institutions like Keonics, Aptech, NIIT etc.- 3 months & above Course duration (3Marks), 6 months & above Course duration (5 Marks) & 1year & above Course duration- Max. 10 Marks
    4. Experience 1 Mark for each year- Max. 10 Marks

**ವಿಶೇಷ ಸೂಚನೆ**: ವರ್ಗವಾರು ಹುದ್ದೆಗಳಲ್ಲಿ ಸಮನಾಂತರ ಅಂಕ ಪಡೆದಲ್ಲಿ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕರ ಹುದ್ದೆಗೆ ಕೃಷಿ/ಕೃಷಿ ಸಂಬಂಧಿತ ಸ್ನಾತಕೋತ್ತರ ಪದವಿ ಮತ್ತು ಸಹಾಯಕ ತಾಂತ್ರಿಕ ವ್ಯವಸ್ಥಾಪಕರ ಹುದ್ದೆಗೆ ಕೃಷಿ/ಕೃಷಿ ಸಂಬಂಧಿತ ಪದವಿಯಲ್ಲಿ ಪಡೆದ ಅಂಕಗಳನ್ನು ಪರಿಗಣಿಸಲಾಗುವುದು.

**1-ಸಾಮಾನ್ಯ ಸೂಚನೆಗಳು:**

- ಆತ್ಮ ಯೋಜನೆಯಡಿಯಲ್ಲಿ ಖಾಲಿ ಇರುವ ಈ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಂಬಂಧ ನೇಮಕಾತಿ ಪ್ರಕ್ರಿಯೆಯ ಪೂರ್ಣ ವಿವರವನ್ನು www.koppal.nic.in ಈ ಜಾಲತಾಣದಲ್ಲಿ ಲಭ್ಯವಿದ್ದು ಅಭ್ಯರ್ಥಿಗಳು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು. ಭೌತಿಕ ಅರ್ಜಿ ಸಲ್ಲಿಕೆಗೆ (ಖುದ್ದಾಗಿ/ಅಂಚೆ/ಕೋರಿಯರ್) ಮೂಲಕ ಅಸ್ಪಷ್ಟ ದಾಖಲೆ ಅಥವಾ ಮಾಹಿತಿ ನೀಡಿದ್ದಲ್ಲಿ, ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ಭಾರತೀಯ ನಾಗರಿಕನಾಗಿರತಕ್ಕದ್ದು..

JOINT DIRECTOR OF AGRICULTURE
KOPPAL

- ಅಭ್ಯರ್ಥಿಗಳು ಭಾರತೀಯ ನಾಗರಿಕನಾಗಿರತಕ್ಕದ್ದು..
- ಈ ನೇಮಕಾತಿ ಸಂಬಂಧ ಅಭ್ಯರ್ಥಿಗಳು ಕೇಳುವ ಸ್ಪಷ್ಟೀಕರಣ, ಪ್ರಶ್ನೋತ್ತರಗಳು, ತಕರಾರು ಇತ್ಯಾದಿಗಳಿಗೆ ಪತ್ರ/ಇ-ಮೇಲ್ ವ್ಯವಹಾರಗಳಿಗೆ ಯಾವುದೇ ಅವಕಾಶವಿರುವುದಿಲ್ಲ.
- ನೇಮಕಾತಿ ಪ್ರಕಟಣೆಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಹೊಂದಿರಲೇಬೇಕು. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊರತುಪಡಿಸಿ, ಇತರೆ ಯಾವುದೇ ಸಮಾನಾಂತರ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದಿಲ್ಲ.
- ಕನ್ನಡ ಭಾಷಾ ಜ್ಞಾನ ಓದುವುದು, ಬರೆಯುವುದು ಮತ್ತು ಮಾತನಾಡುವುದು ಕಡ್ಡಾಯವಾಗಿರುತ್ತದೆ.
- ಅರ್ಜಿಯಲ್ಲಿ ನಮೂದಿಸಿದ ಅಂಕಪಟ್ಟಿ/ಇತರ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಯಾವುದೇ ಹಂತದಲ್ಲಿ ಹಿಂದಕ್ಕೆ ಪಡೆಯುವ/ರದ್ದುಪಡಿಸುವ ಅಧಿಕಾರವನ್ನು ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಪ್ರಾಧಿಕಾರ ಹೊಂದಿರುತ್ತದೆ. ಅಭ್ಯರ್ಥಿಗಳು ಆಯ್ಕೆಯಾದ ನಂತರ ಸಲ್ಲಿಸಿರುವ ದಾಖಲಾತಿಗಳ ನೈಜತೆಯನ್ನು ಸಂಬಂಧಪಟ್ಟ ಸಂಸ್ಥೆ/ಪ್ರಾಧಿಕಾರ /ವಿಶ್ವವಿದ್ಯಾಲಯಗಳಿಂದ ದೃಢೀಕರಿಸಿಕೊಳ್ಳುವ ಹಕ್ಕನ್ನು ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ಪ್ರಾಧಿಕಾರ ಕಾಯ್ದಿರಿಸಿಕೊಂಡಿದೆ.
- ಸೇವಾನುಭವ ದೃಢೀಕರಣ ಪತ್ರವನ್ನು ಸಲ್ಲಿಸುವವರು ಉದ್ಯೋಗದಾತರಿಂದ ಪಡೆದ ಸೇವಾ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ONLINE ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಮೂಲ ದಾಖಲಾತಿಗಳ ಪರಿಶೀಲನೆ ವೇಳೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ಅಭ್ಯರ್ಥಿಗಳು On-Line ಮೂಲಕ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ಹಾಜರುಪಡಿಸಬೇಕಾದ ಪ್ರಮಾಣ ಪತ್ರಗಳ ಪ್ರತಿಯನ್ನು ಅಪ್ ಲೋಡ್ ಮಾಡತಕ್ಕದ್ದು, ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅರ್ಹ ಅಭ್ಯರ್ಥಿಗಳು ತಾವು ಸಲ್ಲಿಸಿದ ಎಲ್ಲಾ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು.

**ಅಭ್ಯರ್ಥಿಯ ದಾಖಲಾತಿ ಪರಿಶೀಲನೆಯ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸಬೇಕಾದ ಮೂಲ ಪ್ರಮಾಣ ಪತ್ರಗಳು: ಈ ಕೆಳಕಂಡಂತೆ ಇರುತ್ತವೆ.**

1. ಮೇಲಿನ ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಪ್ರಮಾಣ ಪತ್ರಗಳು
2. ಕಂಪ್ಯೂಟರ್ ಜ್ಞಾನ ಪ್ರಮಾಣ ಪತ್ರ.
3. ಜನ್ಮ ದಿನಾಂಕವನ್ನು ಪರಿಗಣಿಸಲು ಎಸ್.ಎಸ್.ಎಲ್.ಸಿ ಅಂಕಪಟ್ಟಿಯನ್ನು ಅಪ್ ಲೋಡ್ ಮಾಡತಕ್ಕದ್ದು.
4. ಅನುಭವ ಪ್ರಮಾಣ ಪತ್ರಗಳು.
5. ಇತರೆ ಧಾಖಲಾತಿಗಳು (Articles/Publications, Recognitions/Rewards etc- Newspaper Publications Research Papers published & Medals/Rewards Received)

ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ ರವರು ನಿಗದಿಪಡಿಸಿದ ಸ್ಥಳದಲ್ಲಿ ದಾಖಲಾತಿಗಳ ಪರಿಶೀಲನೆಗೆ ಅಭ್ಯರ್ಥಿಗಳು ಅವರ ಸ್ವಂತ ಖರ್ಚಿನಲ್ಲಿ ಹಾಜರಾಗುವುದು, ಅಭ್ಯರ್ಥಿಗಳು ಅಪ್ ಲೋಡ್ ಮಾಡಿದ ದಾಖಲೆಗಳನ್ನು ಮಾತ್ರ ಪರಿಶೀಲನೆ ಮಾಡಲಾಗುವುದು. ದಾಖಲೆಗಳನ್ನು ಪರಿಶೀಲನೆ ಮಾಡುವ ದಿನಾಂಕವನ್ನು www.koppal.nic.in ತಿಳಿಸಲಾಗುವುದು. ಅಭ್ಯರ್ಥಿಗಳ ಆಯ್ಕೆ ಮತ್ತು ಸ್ಥಳ ನಿಯೋಜನೆ ಜಿಲ್ಲಾ ಆಯ್ಕೆ ಸಮಿತಿ ನೇಮಕಾತಿ ಪ್ರಾಧಿಕಾರದ ನಿರ್ಣಯವೇ ಅಂತಿಮವಾಗಿರುತ್ತದೆ.

**ಪಾಸ್ ಪೋರ್ಟ್ ಭಾವಚಿತ್ರ ಮತ್ತು ಸಹಿ ಕುರಿತು:**

ಭಾವಚಿತ್ರ 100ಕೆ.ಬಿ ಗಿಂತ ಕಡಿಮೆ ಗಾತ್ರ ಇರುವ ಪಾಸ್‌ಪೋರ್ಟ್ ಭಾವ ಚಿತ್ರ ಅಪ್‌ಲೋಡ್ ಮಾಡತಕ್ಕದ್ದು ಮತ್ತು 50 ಕೆ.ಬಿ ಗಿಂತ ಕಡಿಮೆ ಗಾತ್ರವಿರುವ ಮಾದರಿ ಸಹಿಯ ಚಿತ್ರವನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ತಮ್ಮ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡದಿದ್ದರೆ ಅವರ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

**ಪ್ರಮುಖ ಸೂಚನೆಗಳು:**

1. ಅಭ್ಯರ್ಥಿಗಳು Online ಅರ್ಜಿಗಳಲ್ಲಿ ನೀಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ಮೂಲ ದಾಖಲಾತಿಗೆ ಅರ್ಹರೆ ಎಂಬುದನ್ನು ಜಿಲ್ಲಾ ಆಯ್ಕೆ ಸಮಿತಿ ಪರಿಶೀಲಿಸಿ ಮೇಲು



JOINT DIRECTOR OF AGRICULTURE
KOPPAL

ನೋಟಕ್ಕೆ ಅರ್ಹರೆಂದು ಕಂಡುಬಂದ ಅಭ್ಯರ್ಥಿಗಳಿಗೆ ಮಾತ್ರ ಮೂಲದಾಖಲಾತಿ ಪರಿಶೀಲನೆಗೆ ಕರೆಯಲಾಗುವುದು. ಆದ್ದರಿಂದ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ ಪ್ರಮಾಣ ಪತ್ರ, ಅನುಭವ, ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು. ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

2. ಅಭ್ಯರ್ಥಿಗಳು ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ, ಅನರ್ಹರೆಂದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಯ ಅರ್ಜಿಗಳನ್ನು ರದ್ದುಪಡಿಸುವ ಹಕ್ಕು ಸಮಿತಿಗೆ ಇರುತ್ತದೆ.
3. ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೊ ಪ್ರತಿಯನ್ನು ಕಡ್ಡಾಯವಾಗಿ ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.
4. ಅಭ್ಯರ್ಥಿಗಳು ಅರ್ಜಿಗಳನ್ನು Online ಮೂಲಕ Upload ಮಾಡಿದ ನಂತರ ಸ್ಪಷ್ಟವಾಗಿ ಹಾಗೂ ನಿರ್ದಿಷ್ಟ ಗಾತ್ರದಲ್ಲಿ Upload ಮಾಡಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.
5. ನೇಮಕಾತಿ ಅಧಿಸೂಚನೆ ಹೊರಡಿಸಿದ ನಂತರ ಹುದ್ದೆಗಳು ಯಾವುದೇ ಸಮಯದಲ್ಲಿ ತೆರವಾದಲ್ಲಿ, ಕಾಯ್ದಿರಿಸಿದ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನೇ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವದು.
6. ಜಿಲ್ಲೆಯ ಸ್ಥಳೀಯ ಅಭ್ಯರ್ಥಿಗಳಿಗೆ ಮೊದಲ ಅದ್ಯತೆ ನೀಡಲಾಗುವುದು ಹಾಗೂ ಸ್ಥಳ ನಿಯೋಜನೆ ಜಿಲ್ಲಾ ಆಯ್ಕೆ ಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ.

JOINT DIRECTOR OF AGRICULTURE
KOPPAL